ಶ್ರೀ ಬಿ. ಸಿ. ನಂಜುಂಡಯ್ಯ.—ನರಸಮ್ಮನ ಕಚ್ಚೆಯಿಂದ ರಿಲೀಫ್ ಸಿಕ್ಕಿದೆಯೆಂದು ಹೇಳಿದೆ, 100 ಯೂನಿಟ್ಟುಗಳು ಮಾತ್ರ ಅದರಿಂದ ನರಬರಾಯಾದರೂ 300 ಯೂನಿಟ್ಟುಗಳು ಹೆಚ್ಚಾಗಿ ಬೇಕಾಗಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ನರಸಮ್ಮನ ಕಚ್ಚೆಯಿಂದ ಬರುವ ಯೂನಿಟ್ಟುಗಳಿಷ್ಟೆಂಬುದನ್ನು ನಮೂದಿಸಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕೆರೆಯನ್ನು ಈಗ ಜೀರ್ಣೋದ್ಧಾರ ಮಾಡಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

Sri A. G. RAMACHANDRA RAO.—The reply with reference to the restoration is not here because it is not in the main question.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗಿರುವ ಕೆರೆಯ ಕೈಪ್ಯಾಸಿಟಿಯಿಂದ $1\frac{1}{2}$ ತಿಂಗಳಿಗೂ ನೀರು ಸಾಲುವುದಿಲ್ಲ, ಜೀರ್ಣೋದ್ಧಾರ ಮಾಡಿದರೆ ಸಾಧ್ಯ ಎಂದು ಅನೇಕ ಅರ್ಜಿಗಳ ಮೂಲಕ ಗಮನಕ್ಕೆ ತಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೈಪ್ಯಾಸಿಟಿ ಹೆಚ್ಚಿಸಬೇಕೆಂದು ಕೇಳಿದ್ದರು, ಅದನ್ನು ಇಕ್ವೆಸ್ಟಿಗೇಟ್ ಮಾಡಿದ ಮೇಲೆ ಹಾಗೆ ಮಾಡಿದರೆ ಬಹಳ ಅಪಾಯ, ಹೆಚ್ಚಿಸುವುದಕ್ಕಾಗುವುದಿಲ್ಲ ಎಂದು ತಿಳಿಯಬಂತು, ಹೂಳು ತುಂಬಿರುವ ವಿಚಾರ ಪರಿಶೀಲಿಸುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಪ್ರತಿ ವರ್ಷ ಸುಮಾರು 9 ಅಂಗುಲ ಹೂಳು ಬಂದು ಸೇರುತ್ತಿದೆ. ಸಿಲ್ಟ್ ಟ್ರ್ಯಾಪ್ಸ್ ಮಗ್ಗೆರೆ ಹಾಕಿ ಹೂಳು ಬಂದು ಸೇರದಂತೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ರೈತರಿಗೆ ಸಂಬಂಧಪಟ್ಟದ್ದು. ಸರ್ಕಾರ ಎಷ್ಟು ಮಾಡಬೇಕೆಂಬುದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ರೈತರು ತಮ್ಮ ಭಾಗದ ಕೆಲಸವನ್ನು ಮಾಡುವುದಾಗಿ ಹತ್ತು ವರ್ಷಗಳಿಂದ ಅರ್ಜಿ ಕೊಡುತ್ತಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅರ್ಜಿ ಕೊಟ್ಟರೆ ಸಾಲದು, ಕೆಲಸ ಮಾಡಬೇಕು.

ಶ್ರೀ ಬಿ. ಸಿ. ನಂಜುಂಡಯ್ಯ.—ಅವರು ತಮ್ಮ ಭಾಗದ ಕೆಲಸ ಮಾಡುತ್ತೇವೆಂದು ಹೇಳುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇವೆ.

Tank of Badamaranahalli of Hoolikunte Hobli (Improvement of).

Q.—782. **Sri B. N. RAME GOWDA** (Sira).—

Will the Government be pleased to state :—

(*a*) whether any representations have been made to improve the tank of Badamaranahalli of Hoolikunte hobli in Sira taluk ;

(*b*) whether any estimate has been prepared to improve the tank and at what stage it is ?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) An estimate amounting to Rs. 28,500 for restoring the tank is under examination.

ಶ್ರೀ ಬಿ. ಎಕ್. ರಾಮೇಗೌಡ.—ಅಂದಾಜು ತಯಾರಾಗಿ ಎಷ್ಟು ದಿವಸಗಳಾದುವು ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾರೀಖು ಗೊತ್ತಿಲ್ಲ.

ಶ್ರೀ ಬಿ. ಎಕ್. ರಾಮೇಗೌಡ.—ಅಂದಾಜು ತಯಾರಾಗಿ ಎರಡು ವರ್ಷಗಳಿಗೆ ಮೇಲ್ಪಟ್ಟಾಗಿದೆ, ಈಗಲಾದರೂ ಕೂಡ ಜರೂರಾಗಿ ಕೆಲಸ ತೆಗೆದುಕೊಂಡು ಪೂರೈಸಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಚೀಫ್ ಎಂಜಿನಿಯರ ಹತ್ತಿರ ಬಂದಿದೆ, ಪರಿಶೀಲನೆಯಲ್ಲಿದೆ, ಜಾಗ್ರತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Large Industries in K.G.F. City (Starting of)

Q.—697. **Sri K. S. VASAN** (Kolar Gold Fields).—

Will the Government be pleased to state :—

the action they propose to take for starting some large-scale industry in the City of Kolar Gold Fields ?

A.—**Dr. R. NAGAN GOWDA** (Minister for Industries and Excise).—

A Committee was appointed by Government to examine and report whether facilities exist in the area for starting an industry and if so, what industry—large scale or small scale. The report of the Committee was received on 20th September 1956 and is receiving the consideration of the Government.

Sri K. S. VASAN.—Will the report be made available to the members of this House ?

***Dr. R. NAGAN GOWDA.**—The report is under consideration. After that, I think, it would be made available.

Sri H. C. LINGA REDDY.—What are the recommendations of that Committee ?

Dr. R. NAGAN GOWDA.—Some members have made some recommendations and the Committee has made some recommendations.

Sri H. C. LINGA REDDY.—I want to know a few major industries that have been recommended by the Committee in the report.

Dr. R. NAGAN GOWDA.—The Director of Rural Industries has suggested a scheme for starting a Powerloom Society, Ambar Khadi Production Centre, Village Oil Units and so on. The whole report is under the consideration of the Government; we have received it only a week back.

Sri P. M. SWAMIDURAI.—You were pleased to mention that the Director of Rural Industries has made certain recommendations. I do not see any recommendation by the Committee on those industries. Will the Government be pleased to consider the recommendation of the Committee and place it before the House?

Dr. R. NAGAN GOWDA.—Yes; the whole report would be examined and placed before the House.

Co-operative Sugar Factory at Pandavapura.

Q.—759.—Sri B. P. NAGARAJA MURTHY (Malavalli).—

Will the Government be pleased to state:—

(*a*) whether a Co-operative Sugar Factory at Pandavapura has been sanctioned;

(*b*) whether they have examined the several disadvantages that would follow from the setting up of such a factory at Pandavapura?

A.—Dr. R. NAGAN GOWDA (Minister for industries and Excise).—

(*a*) Yes.

(*b*) No disadvantages are excepted to follow from a factory established for the benefit of the people in the area.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈಗ ತಾವು ಆ ಪಾಂಡವಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದ ಮೇಲೆ ಆ ಪ್ರದೇಶದಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ಹೆಚ್ಚು ಕಬ್ಬನ್ನು ಬೆಳೆಯಬೇಕಾಗಿರುತ್ತೆಂಬುದು ತಮಗೆ ಗೊತ್ತಿದೆಯೇ?

Dr. R. NAGAN GOWDA.—The total area of sugarcane grown in the taluks of Mandya, Maddur, Pandavapura, Channapatna and Srirangapatna in the year 1954-55 is 17,000 acres.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ: ಆ ಪಾಂಡವಪುರದಲ್ಲಿ ಒಂದು ಸಕ್ಕರೆ ಕಂಪೆನಿಯನ್ನು ಪ್ರಾರಂಭಿಸಿದನಂತರ ಆ ಪ್ರದೇಶದ ಸುತ್ತಮುತ್ತಣ ಕಬ್ಬು ಬೆಳೆಯಲ್ಪಡತಕ್ಕ ಪ್ರದೇಶವೆಷ್ಟು ಅದರ ವಿಸ್ತೀರ್ಣವೆಷ್ಟು ಎಂಬುದು.

Dr. R. NAGAN GOWDA.—It is very difficult to say. If the Hon'ble Member mentions at least the radius of the area, it will be easy to answer.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈಗ ಹಾಲಿ ಪಾಂಡವಪುರ ತಾಲ್ಲೂಕಿನಲ್ಲಿ ಕಬ್ಬನ್ನು ಬೆಳೆಯುತ್ತಿರುವ ಪ್ರದೇಶಕ್ಕಿಂತ ಕಂಪೆನಿ ಪ್ರಾರಂಭವಾದ ಮೇಲೆ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಹೆಚ್ಚು ಕಬ್ಬನ್ನು ಬೆಳೆಯಬೇಕಾಗುತ್ತದೆ ಎಂಬುದನ್ನಾದರೂ ತಿಳಿಸುತ್ತೀರಾ;

Dr. R. NAGAN GOWDA.—In 1954-55 there was about 14,050 acres. For a sugarcane factory supplies of cane are received from a radius of 10 miles. In the case of some factories in South India it is 20 miles. So we must take into consideration all this.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸ್ವಾಮಿ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ. ಎಷ್ಟು ಎಕರೆ ಪ್ರದೇಶದಲ್ಲಿ ಹೆಚ್ಚು ಕಬ್ಬನ್ನು ಬೆಳೆಯಬೇಕಾಗಿರುತ್ತದೆ ಎಂಬುದು ನನ್ನ ಪಶ್ನೆ.

Dr. R. NAGAN GOWDA.—I would like to have notice to answer that question. What particular information the Hon'ble Member wanted could not be guessed by the way the question was put. That is why we could not get that information and give it here.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹಾಗಾದರೆ ಸರ್ಕಾರ ಒಂದು ಸಕ್ಕರೆ ಕಂಪೆನಿಯನ್ನು ಸ್ಥಾಪಿಸಲು ಅನುಮತಿ ನೀಡತಕ್ಕ ಕಾಲದಲ್ಲಿ ಈ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಭಾವಿಸೋಣವೇ?

Dr. R. NAGAN GOWDA.—It has been taken into consideration.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹಾಗಾದರೆ ಬೇಸಗೆಯಲ್ಲಿ ಈ ಕೃಷ್ಣರಾಜಸಾಗರದ ನೀರಿನ ಮಟ್ಟ ಬಹಳ ಕಡಮೆಯಾಗಿರುತ್ತದೆಂಬ ಅಂಶವನ್ನು ತಾವು ಗಮನಕ್ಕೆ ತೆಗೆದುಕೊಳ್ಳಲಿಲ್ಲವೇ?

*Sri H. SIDDAVEERAPPA.—It is not correct to say that the Government did not examine all the facts before taking a decision to locate the factory at Pandavapura. It was examined thoroughly. I may say the whole question was examined. While locating a sugarcane factory, the question of growing sugarcane is not the only consideration. There are also other considerations to be taken.